# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1061 |
| ಸದಸ್ಯರ ಹೆಸರು | : | ಡಾ: ಉಮಾಶ್ರೀ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 17.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಎಷ್ಟು ಜನ ಬಿಸಿಯೂಟ ಕಾರ್ಮಿಕರು ಇದ್ದಾರೆ; ಇವರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವೆಷ್ಟು; (ವಿವರ ನೀಡುವುದು)</td><td>
ಪ್ರಸ್ತುತ ಮಧ್ಯಾಹ್ನ ಉಪಹಾರ ಯೋಜನೆಯಡಿ 44,812 ಮುಖ್ಯ ಅಡುಗೆ ಸಿಬ್ಬಂದಿಗಳು ಮತ್ತು 68,387 ಸಹಾಯಕ ಅಡುಗೆ ಸಿಬ್ಬಂದಿಗಳನ್ನು ಒಳಗೊಂಡಂತೆ ಒಟ್ಟಾರೆಯಾಗಿ 1,13,199 ಅಡುಗೆ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>
ಕೇಂದ್ರ ಸರ್ಕಾರವು ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಹಾಯಕರಿಗೆ ಮಾಸಿಕ ರೂ.1000/-(ಒಂದು ಸಾವಿರ) ಗೌರವ ಸಂಭಾವನೆಯನ್ನು ನಿಗದಿಪಡಿಸಿದ್ದು, ಈ ಪೈಕಿ ರೂ.600/-ಗಳನ್ನು ಕೇಂದ್ರ ಸರ್ಕಾರದಿಂದ ಹಾಗೂ ರೂ.400/-ಗಳನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ. ಇದರ ಹೊರತಾಗಿ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ಅಡುಗೆ ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ನೀಡಲಾಗುತ್ತಿದ್ದು, ಮುಖ್ಯ ಅಡುಗೆ ಸಿಬ್ಬಂದಿಗಳಿಗೆ ಮಾಸಿಕವಾಗಿ ರೂ 2700/- ಮತ್ತು ಸಹಾಯಕ ಅಡುಗೆ ಸಿಬ್ಬಂದಿಗಳಿಗೆ ಮಾಸಿಕವಾಗಿ ರೂ 2600/- ಹೆಚ್ಚುವರಿ ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತಿದೆ. ವಿವರ ಕೆಳಕಂಡಂತಿದೆ.
<table>
<tr><th>ಸಿಬ್ಬಂದಿ ವಿವರ</th><th>ಮಾಸಿಕ ಸಂಭಾವನೆಯ ಕೇಂದ್ರದ ಪಾಲು (60%)</th><th>ಮಾಸಿಕ ಸಂಭಾವನೆಯ ರಾಜ್ಯದ ಪಾಲು (40%)</th><th>ರಾಜ್ಯ ದಿಂದ ನೀಡಲಾಗುತ್ತಿರುವ ಹೆಚ್ಚುವರಿ ಮಾಸಿಕ ಸಂಭಾವನೆಯ ಮೊತ್ತ</th><th>ಒಟ್ಟು ಮಾಸಿಕ ಸಂಭಾವನೆಯ ಮೊತ್ತ ರೂಪಾಯಿಗಳಲ್ಲಿ</th></tr>
<tr><td>ಮುಖ್ಯ ಅಡುಗೆಯವರು</td><td>600/-</td><td>400/-</td><td>2700/-</td><td>3700/-</td></tr>
<tr><td>ಸಹಾಯಕ ಅಡುಗೆಯವರು</td><td>600/-</td><td>400/-</td><td>2600/-</td><td>3600/-</td></tr>
</table>
</td></tr>
<tr><td>ಆ)</td><td>ರಾಜ್ಯದಲ್ಲಿ ಬಿಸಿಯೂಟ ಕಾರ್ಮಿಕರಿಗೆ ಗೌರವಧನವನ್ನು ಹೆಚ್ಚಿಸುವ ಬೇಡಿಕೆ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>
ಬಂದಿದೆ<br><br>
ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ರಾಜ್ಯ ಸರ್ಕಾರದಿಂದ ನೀಡಲಾಗುವ ಹೆಚ್ಚುವರಿ ಗೌರವ ಸಂಭಾವನೆಯನ್ನು ಕಾಲ ಕಾಲಕ್ಕೆ ಹೆಚ್ಚಿಸಲಾಗಿದೆ. ಮಧ್ಯಾಹ್ನ ಉಪಹಾರ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೂ ಅಡುಗೆ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಹೆಚ್ಚಿಸಲಾಗಿರುವ ಗೌರವ ಸಂಭಾವನೆಯ ವಿವರಗಳನ್ನು ಅನುಬಂಧಿಸಿದೆ.
</td></tr>
</table>

<table>
<tr>
<td>ಇ)</td>
<td>ಅಕ್ಷರ ದಾಸೋಹ ಕಾರ್ಮಿಕರಿಗೆ ಗೌರವಧನ ಹೊರತುಪಡಿಸಿ ಬೇರೆ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ?</td>
<td>
ಅಡುಗೆ ಸಿಬ್ಬಂದಿಗಳಿಗೆ ನೀಡಲಾಗಿರುವ ಇತರೆ ಸೌಲಭ್ಯಗಳ ವಿವರ ಕೆಳಕಂಡಂತಿದೆ.<br><br>
1)ಅಡುಗೆ ಸಿಬ್ಬಂದಿಯವರು ಅಡುಗೆ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಸುಟ್ಟಗಾಯಗಳಾದಲ್ಲಿ ರೂ.30,000/–, ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ಗರಿಷ್ಟ ರೂ.75,000/– ಮತ್ತು ಸುಟ್ಟಗಾಯಗಳಾಗಿ ಮರಣ ಹೊಂದಿದ ಸಂದರ್ಭದಲ್ಲಿ ರೂ.1,00,000/–ಗಳ ಪರಿಹಾರವನ್ನು ನೀಡಲಾಗುತ್ತದೆ.<br><br>
2) ಮಧ್ಯಾಹ್ನ ಉಪಹಾರ ಯೋಜನೆಯಡಿ ಆಯ್ಕೆಗೊಂಡು 60 ವರ್ಷಗಳ ವಯೋಮಾನವನ್ನು ಪೂರ್ಣಗೊಳಿಸಿ ದಿನಾಂಕ: 31.03.2022ಕ್ಕೆ ಅಥವಾ ನಂತರ ಕರ್ತವ್ಯದಿಂದ ಬಿಡುಗಡೆ ಹೊಂದಿದ ಅಡುಗೆ ಸಿಬ್ಬಂದಿಗೆ ಅಂತಿಮವಾಗಿ ಒಂದು ಬಾರಿಯ ಇಡಿಗಂಟು ಸೌಲಭ್ಯವನ್ನು ಕೆಳಕಂಡಂತೆ ನೀಡಲು ಅನುಮತಿ ನೀಡಲಾಗಿದೆ.<br><br>
<table>
<tr><th>ಅಡುಗೆ ಸಿಬ್ಬಂದಿಯವರು ಸಲ್ಲಿಸಿದ ಸೇವೆಯ ಅವಧಿ</th><th>ಅಡುಗೆ ಸಿಬ್ಬಂದಿಗಳು ಸಲ್ಲಿಸಿದ ಸೇವೆಯನ್ನು ಆಧರಿಸಿ ಒಂದು ಬಾರಿಗೆ ನೀಡಲು ಆದೇಶಿಸಲಾಗಿರುವ ಅಂತಿಮ ಇಡಿಗಂಟಿನ ಮೊತ್ತ</th></tr>
<tr><td>5 ವರ್ಷಕ್ಕೂ ಮೇಲ್ಪಟ್ಟು ಹಾಗೂ 15 ವರ್ಷಕ್ಕಿಂತ ಕಡಿಮೆ</td><td>ರೂ.30,000/–<br>(ಮೂವತ್ತು ಸಾವಿರ ಮಾತ್ರ)</td></tr>
<tr><td>15 ವರ್ಷ ಹಾಗೂ ಅದಕ್ಕೂ ಹೆಚ್ಚು</td><td>ರೂ.40,000/–<br>(ನಲವತ್ತು ಸಾವಿರ ಮಾತ್ರ)</td></tr>
</table>
</td>
</tr>
</table>

ಇಪಿ 32 ಎಂಎಂಎಸ್ 2025

**(ಎಸ್.ಮಧು ಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**

# ಅನುಬಂಧ

## ಅಡುಗೆ ಸಿಬ್ಬಂದಿಗಳಿಗೆ 2001 ರಿಂದ ಇಲ್ಲಿಯವರೆಗೆ ನೀಡಿರುವ ಮತ್ತು ಪ್ರಸ್ತುತ ನೀಡಲಾಗುತ್ತಿರುವ ಮಾಸಿಕ ಗೌರವ ಸಂಭಾವನೆಯ ವಿವರ

| ಕ್ರ.ಸಂ | ಗೌರವ ಸಂಭಾವನೆ ಜಾರಿ ಮಾಡಿದ ವರ್ಷ ಮತ್ತು ದಿನಾಂಕ | ಹೆಚ್ಚಿಸಲಾದ ಗೌರವ ಸಂಭಾವನೆ ಮೊತ್ತ | ಮುಖ್ಯ ಅಡುಗೆ ಸಿಬ್ಬಂದಿಗಳಿಗೆ | | | | ಸಹಾಯಕ ಅಡುಗೆ ಸಿಬ್ಬಂದಿಗಳಿಗೆ | | | |
|---|---|---|---|---|---|---|---|---|---|---|
| | | | ಕೇಂದ್ರದ ಪಾಲು | ರಾಜ್ಯದ ಪಾಲು | ಹೆಚ್ಚುವರಿ ರಾಜ್ಯದ ಪಾಲು | ಒಟ್ಟು ಸಂಭಾವನೆ ಮೊತ್ತ | ಕೇಂದ್ರದ ಪಾಲು | ರಾಜ್ಯದ ಪಾಲು | ಹೆಚ್ಚುವರಿ ರಾಜ್ಯದ ಪಾಲು | ಒಟ್ಟು ಸಂಭಾವನೆ ಮೊತ್ತ |
| 1 | 2001 ದಿನಾಂಕ: 02.10.2001 ರಿಂದ | | 0.00 | 650.00 | 0.00 | **650.00** | 0.00 | 450.00 | 0.00 | **450.00** |
| 2 | 2008 ದಿನಾಂಕ: 30.08.2008 ರಿಂದ | | 0.00 | 800.00 | 0.00 | **800.00** | 0.00 | 550.00 | 0.00 | **550.00** |
| 3 | 2009 ದಿನಾಂಕ: 01.12.2009 ರಿಂದ | **ಮುಖ್ಯ ಅಡುಗೆಯವರಿಗೆ ಮಾಸಿಕ ರೂ 100/-** | 750.00 | 250.00 | 100.00 | **1100.00** | 750.00 | 250.00 | 0.00 | **1000.00** |
| 4 | 2013 ದಿನಾಂಕ: 01.08.2013 ರಿಂದ | **100/-** | 750.00 | 250.00 | 200.00 | **1200.00** | 750.00 | 250.00 | 100.00 | **1100.00** |
| 5 | 2014 ದಿನಾಂಕ: 01.04.2014 ರಿಂದ | **500/-** | 750.00 | 250.00 | 700.00 | **1700.00** | 750.00 | 250.00 | 600.00 | **1600.00** |
| 6 | 2015 ದಿನಾಂಕ: 01.04.2015 ರಿಂದ | ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನದ ಹಂಚಿಕೆ ಅನುಪಾತವನ್ನು ದಿನಾಂಕ: 01.04.2015 ರಿಂದ 60:40ಗೆ ನಿಗದಿಪಡಿಸಲಾಗಿರುತ್ತದೆ. | 600.00 | 400.00 | 700.00 | **1700.00** | 600.00 | 400.00 | 600.00 | **1600.00** |
| 7 | 2016 ದಿನಾಂಕ: 01.04.2016 ರಿಂದ | **300/-** | 600.00 | 400.00 | 1000.00 | **2000.00** | 600.00 | 400.00 | 900.00 | **1900.00** |
| 8 | 2017 ದಿನಾಂಕ: 01.07.2017 ರಿಂದ | **200/-** | 600.00 | 400.00 | 1200.00 | **2200.00** | 600.00 | 400.00 | 1100.00 | **2100.00** |
| 9 | 2018 ದಿನಾಂಕ: 01.01.2018 ರಿಂದ | **500/-** | 600.00 | 400.00 | 1700.00 | **2700.00** | 600.00 | 400.00 | 1600.00 | **2600.00** |
| 10 | 2022 ದಿನಾಂಕ: 01.06.2022 ರಿಂದ ಇಲ್ಲಿಯ ವರೆಗೆ | **1000/-** | 600.00 | 400.00 | 2700.00 | **3700.00** | 600.00 | 400.00 | 2600.00 | **3600.00** |